MARCH 15, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ರಂಗ ಪಂಚಮಿಯ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು**

<><><>

- **ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ, ಇಂದು ಬಣ್ಣದೋಕುಳಿ ಸಂಭ್ರಮ.**
- **ಬೆಂಗಳೂರಿನ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ, 40ನೇ ವಾರ್ಷಿಕೋತ್ಸವ ಇಂದು.**
- **'ಚಿಟ್ಟೆಗಳ ಬಗ್ಗೆ ತಿಳಿಯಿರಿ' ವಿಶೇಷ ದಿನಾಚರಣೆ, ಅರ್ಥಪೂರ್ಣ ಸಂಪನ್ನ.**
- **ಇಂದು, ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ.**
- **ಸ್ವಾತಂತ್ರ್ಯ ಹೋರಾಟಗಾರ, ವಿದ್ಯಾವಾಚಸ್ಪತಿ ಪಂಚಾಕ್ಷರಿ ಹಿರೇಮಠ, ಧಾರವಾಡದಲ್ಲಿ ನಿಧನ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ, ಬಣ್ಣದೋಕುಳಿಯ ಸಂಭ್ರಮ ಮನೆ ಮಾಡಿದೆ. ಉತ್ತರ ಕರ್ನಾಟಕ ಭಾಗದ ಹೋಳಿ ಮತ್ತು ಓಕುಳಿ ಹಬ್ಬಕ್ಕೆ, ಜಾನಪದ ಹಿನ್ನೆಲೆ ಮತ್ತು ಗ್ರಾಮ್ಯ ಸೊಗಡಿದೆ. ಆಚರಣೆಯಲ್ಲಿ, ಹಿರಿಯರ ಹೋಳಿ ಪದಗಳ ಸೊಬಗಿದೆ. ದುಷ್ಟರ ಸಂಹಾರ, ಶಿಷ್ಟರ ವಿಜಯ ಹಾಗೂ ವಸಂತ ಕಾಲದ ಆಗಮನವನ್ನು ಪ್ರಕೃತಿ ಸೂಚಿಸುತ್ತದೆ.**

<><><>

**ಇಂದು ಬೆಳಗ್ಗೆ 11.30ಕ್ಕೆ ಬೀದರ್‌ನಲ್ಲಿ ಆಯೋಜಿತ, ಜಾನಪದ ಅಕಾದೆಮಿ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ, ವಿಶೇಷ ಪ್ರಶಸ್ತಿ ಸ್ವೀಕರಿಸಲಿರುವ, ಹಿರಿಯ ಜಾನಪದ ವಿದ್ವಾಂಸ, ಹುಬ್ಬಳ್ಳಿಯ ರಾಮಣ್ಣ ಮೂಲಗಿ, ಹೋಳಿ ಹಬ್ಬದ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.**

<><><>

ರಾಮಣ್ಣ ಮೂಲಗಿ ಧ್ವನಿ 36 ಸೆಕೆಂದುಗಳು

<><><>

ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಹಾಗೂ ಧಾರವಾಡ ಸಂಸದ ಪ್ರಲ್ಹಾದ ಜೋಶಿ, ನಾಡಿನ ಜನತೆಗೆ ಹೋಳಿ ಹಬ್ಬದ ಶುಭಾಶಯ ಕೋರಿದ್ದಾರೆ.

<><><>

ಸಚಿವ ಪ್ರಲ್ಹಾದ ಜೋಶಿ ಧ್ವನಿ 38 ಸೆಕೆಂದುಗಳು

<><><>

ಹಾವೇರಿಯಲ್ಲಿ ಹೋಳಿ ಹಬ್ಬವನ್ನು, ಪ್ರಯಾಗ್‌ರಾಜ್ ಮಹಾಕುಂಭ ಮೇಳದ ಮಾದರಿ ಮೆರವಣಿಗೆ ಮೂಲಕ, ವಿಶಿಷ್ಟವಾಗಿ ಆಚರಿಸಲಾಯಿತು. ಈ ಕುರಿತು ನಮ್ಮ ಪ್ರತಿನಿಧಿಯಿಂದ ಹೆಚ್ಚಿನ ಮಾಹಿತಿ..

<><><>

ಮಂಜುನಾಥ ಗುಡಿಸಾಗರ ಧ್ವನಿ 24 ಸೆಕೆಂದುಗಳು

<><><>

ಹೋಳಿ ಹಬ್ಬದ ಸಂದರ್ಭದಲ್ಲಿ, ಜನಪದ ಕಲೆಯ ಮೂಲಕ, ರಾಷ್ಟ್ರೀಯ ಜಾಗೃತಿ ಮೂಡಿಸುವ, ವಿಶಿ ್ಟ ಆಚರಣೆ ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನಲ್ಲಿ ಕಾಣಬಹುದು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ, ಬ್ರಿಟಿ ’ರು ಭಾರತೀಯರ ಮೇಲೆ ನಡೆಸುತ್ತಿದ್ದ ದೌರ್ಜನ್ಯವನ್ನು, ತಮ್ಮ ಜಾನಪದ ಶೈಲಿಯ ವೇ ’ ಭೂ ’ಣಗಳ ಮೂಲಕ, ಅಣಕು ಪ್ರದರ್ಶನ ಕೈಗೊಂಡು, ರಾಷ್ಟ್ರೀಯತೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಆ ಪರಂಪರೆಯನ್ನು, ಇಂದಿಗೂ ಮುಂದುವರೆಸಿಕೊಂಡು ಬಂದು, “ರೈತ ಬಂಧು” ಎನ್ನುವ ಶೀರ್ಷಿಕೆ ಮೂಲಕ, ಪಾರಂಪರಿಕ ಕೃಷಿ ಪದ್ಧತಿಯ ಕಡೆ ಮುಖ ಮಾಡಿರುವ ರೈತರ, ಅಣಕು ಪ್ರದರ್ಶನ ಏರ್ಪಡಿಸಿ, ಗಮನ ಸೆಳೆದಿದ್ದಕ್ಕಾಗಿ, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಶ್ಲಾಘಿಸಿದ್ದಾರೆ.

<><><>

ಬೆಂಗಳೂರು ನಗರ ವಿಶ್ವವಿದ್ಯಾಲಯದ, ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ, 40ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದೆ. ಇಂದು ಮಧ್ಯಾಹ್ನ 2 ಗಂಟೆಗೆ, ಸೆಂಟ್ರಲ್ ಕಾಲೇಜು ಆವರಣದ, ಜ್ಞಾನಜ್ಯೋತಿ ಸಭಾಂಗಣದಲ್ಲಿ, ಬೆಂಗಳೂರಿನ ಜಪಾನ್ ಕಾನ್ಸುಲೇಟ್ ಜನರಲ್ ಸಹಯೋಗದಲ್ಲಿ, ಪ್ರಧಾನ ಸಮಾರಂಭ ಜರುಗಲಿದೆ. 1985 ರಲ್ಲಿ ಸ್ಥಾಪಿತವಾದ ವಿದೇಶಿ ಭಾಷೆಗಳ ಇಲಾಖೆ, 2017ರಲ್ಲಿ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ ಎಂದು ಮರು ನಾಮಕರಣಗೊಂಡಿತು. ಇಡೀ ದಕ್ಷಿಣ ಭಾರತದಲ್ಲಿ, ಒಂದೇ ಸೂರಿನಡಿ, 14 ವಿದೇಶಿ ಭಾಷೆಗಳನ್ನು ಅಲ್ಪಾವಧಿ ಕೋರ್ಸ್‌ಗಳಿಂದ, ಡಾಕ್ಟರೇಟ್ ಪದವಿ ಹಂತದ ವರೆಗೆ ಬೋಧಿಸುತ್ತಿರುವ, ಏಕೈಕ ಸಂಸ್ಥೆ ಇದಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಪ್ರಕೃತಿಯಲ್ಲಿ ವರ್ಣಗಳ ಚಿತ್ತಾರ ಮೂಡಿಸುತ್ತ, ನೇರ ಪರಾಗ ಸ್ಪರ್ಷದ ಮೂಲಕ, ಹೂವು, ಹಣ್ಣುಗಳ ಬಣ್ಣ, ಗಾತ್ರ ಮತ್ತು ರುಚಿಗೆ ವಿಶಿಷ್ಟ ಕೊಡುಗೆ ನೀಡುವ ಚಿಟ್ಟೆ, ಹ್ಯಾತೆ ಹಾಗೂ ಪತಂಗಗಳು, ನೋಡುಗರ ಕಣ್ಮನ ಸೆಳೆಯುತ್ತವೆ. ಪ್ರತಿ ವರ್ಷ ಮಾರ್ಚ್ 14ನೇ ತಾರೀಖು, 'ಚಿಟ್ಟೆಗಳ ಬಗ್ಗೆ ತಿಳಿಯಿರಿ' ಎಂಬ ವಿಶೇಷ ದಿನವನ್ನು, ರಾಷ್ಟ್ರ ಮಟ್ಟದಲ್ಲಿ ಆಚರಿಸಲಾಗುತ್ತದೆ. ಸಹ್ಯಾದ್ರಿ ಬರ್ಡ್ ವಿಂಗ್ ಅಥವಾ ಸದರ್ನ್ ಬರ್ಡ್ ವಿಂಗ್, ಕರ್ನಾಟಕದ ರಾಜ್ಯ ಪಾತರಗಿತ್ತಿ. ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಹುಣಸೂರು ಶಾಸ್ತ್ರಿ ಶಾಲೆಯ ಶಿಕ್ಷಕ ಹಾಗೂ ಚಿಟ್ಟೆಗಳ ಸಂಶೋಧಕ ಚತುರ್ವೇದ ಶೇಕ್.

<><><>

ಚತುರ್ವೇದ ಶೇಕ ಧ್ವನಿ 50 ಸೆಕೆಂದುಗಳು

<><><>

ಇಂದು, ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ. "ಸುಸ್ಥಿರ ಜೀವನ ಶೈಲಿಗೆ, ನ್ಯಾಯಯುತ ಪರಿವರ್ತನೆ" ಎಂಬ ಧ್ಯೇಯದೊಂದಿಗೆ, ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನು, ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ಗ್ರಾಹಕ ಚಳವಳಿ, ಗ್ರಾಹಕರ ಒಗ್ಗಟ್ಟು, ಗ್ರಾಹಕರ ಹಕ್ಕುಗಳನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂದು, ಒತ್ತಾಯಿಸಲು ಈ ದಿನ ಮೀಸಲಿದೆ. ಮಾರುಕಟ್ಟೆ ದುರುಪಯೋಗಗಳು ಮತ್ತು ಗ್ರಾಹಕರ ಹಕ್ಕುಗಳನ್ನು ದುರ್ಬಲಗೊಳಿಸುವ, ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ಅವಕಾಶವನ್ನು ನೀಡುತ್ತದೆ.

<><><>

ಉತ್ತರಕನ್ನಡ ಜಿಲ್ಲೆ, ಹಳಿಯಾಳ ತಾಲೂಕು ಗಾಡಗೇರಾ ಗ್ರಾಮದ ಬುಡಕಟ್ಟು ಸಿದ್ದಿ ಸಮುದಾಯದ, ಜಾನಪದ ಕಲಾವಿದೆ, ಸೋಬಿನ್ ಮೋತೆಸ್ ಕಾಂಬ್ರೆಕರ್ ಅವರು, 2024ನೇ ಸಾಲಿನ ಕೊಂಕಣಿ ಸಾಹಿತ್ಯ ಅಕಾದೆಮಿ ಪ್ರಶಸ್ತಿಗೆ ಭಾಜನರಾಗಿರುವುದು, ಹೆಮ್ಮೆಯ ಸಂಗತಿ ಎಂದು, ಶಾಸಕ ಆರ್.ವಿ. ದೇಶಪಾಂಡೆ ಶ್ಲಾಘಿಸಿದ್ದಾರೆ. ಹಲವು ದಶಕಗಳ ಕಾಲ ಸಿದ್ದಿ ನೃತ್ಯ, ದಮಾಮಿ ವಾದಕರಾಗಿ, ಮೂಲ ಸಿದ್ದಿ ಸಂಸ್ಕೃತಿಯನ್ನು ಹುಟ್ಟು ಹಾಕಿ, ಮರಾಠಿ ಮಿಶ್ರಿತ ಕೊಂಕಣಿ ಮಾತೃ ಭಾ ೆಯಲ್ಲಿ, ಸಂಪ್ರದಾಯಿಕ ಜಾನಪದ ಹಾಡುಗಳನ್ನೇ ಬದುಕಿನ ಹಾದಿಯಾಗಿಸಿಕೊಂಡು, ನೆಲದ ಕಲೆಯನ್ನು, ದೇಶ, ವಿದೇಶಗಳಿಗೂ ಪರಿಚಯಿಸಿದ, 65 ವ ್ಷದ ಹಿರಿಯ ಜೀವ ಸೋಬಿನ್ ಮೋತೆಸ್ ಕಾಂಬ್ರೆಕರ್, ಪ್ರಶಸ್ತಿಯ ಗೌರವ ಹೆಚ್ಚಿಸಿದ್ದಾರೆ ಎಂದು, ಅವರು ಅಭಿಮಾನ ವ್ಯಕ್ತ ಪಡಿಸಿದ್ದಾರೆ.

<><><>

ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ, ವಿದ್ಯಾವಾಚಸ್ಪತಿ ಪಂಚಾಕ್ಷರಿ ಹಿರೇಮಠ, ಧಾರವಾಡದಲ್ಲಿ ನಿನ್ನೆ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾದೆಮಿ ಅನುವಾದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾದೆಮಿ ಗೌರವ ಪ್ರಶಸ್ತಿ, ಸಹಿತ ಹಲವು ಪುರಸ್ಕಾರಗಳು ಅವರಿಗೆ ಸಂದಿವೆ. ಕೊಪ್ಪಳ ಜಿಲ್ಲೆ, ಬಿಸರಹಳ್ಳಿಯಲ್ಲಿ ಇಂದು ಸಂಜೆ 4.30ಕ್ಕೆ ಪಾರ್ಥಿವ ಶರೀರದ ಅಂತ್ಯಕ್ರಿಯೆ ನೆರವೇರಲಿದೆ. ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

<><><>

ರಾಯಚೂರು ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶದ ಹಿನ್ನೆಲೆ, ಬಿಸಿ ಗಾಳಿ ಬೀಸುತ್ತಿದ್ದು, ಸಾರ್ವಜನಿಕರಿಗೆ ಹೀಟ್ ಅಥವಾ ಸನ್ ಸ್ಟ್ರೋಕ್ ಸಾಧ್ಯತೆ ಇದ್ದು, ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ಕೆ. ನಿತೀಶ್ ಮನವಿ ಮಾಡಿದ್ದಾರೆ. ಭಾರತೀಯ ಹವಾಮಾನ ಇಲಾಖೆ ಹಾಗೂ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮುನ್ಸೂಚನೆಯಂತೆ, ಮಧ್ಯಾಹ್ನದ ವೇಳೆ ಓಡಾಡದಂತೆ, ನಿರ್ಜಲೀಕರಣದಿಂದ ಬಳಲದಂತೆ ಕ್ರಮ ವಹಿಸಲು ಅವರು ಸೂಚಿಸಿದ್ದಾರೆ.

<><><>

## ಈಗ ಸಂಕ್ಷಿಪ್ತ ಸುದ್ದಿಗಳು

<><><>

ಉಪ ಲೋಕಾಯುಕ್ತ ಬಿ.ವೀರಪ್ಪ ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

<><><>

ಶಿವಮೊಗ್ಗದ ಜೆ.ಎನ್.ಎನ್. ಇಂಜಿನಿಯರಿಂಗ್ ಕಾಲೇಜಿನ ಕ್ರೀಡಾಂಗಣದಲ್ಲಿ, ಇಂದಿನಿಂದ 18ರ ವರೆಗೆ, ರಾಜ್ಯ ಮಟ್ಟದ 26ನೇ ಅಂತರ್ ವಿಶ್ವವಿದ್ಯಾಲಯಗಳ ಅಥ್ಲೆಟಿಕ್ ಕ್ರೀಡಾಕೂಟ ಜರುಗಲಿದೆ.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು, ಬರುವ 18 ರಿಂದ 21ರ ವರೆಗೆ, ಶಿವಮೊಗ್ಗಕ್ಕೆ ಭೇಟಿ ನೀಡಿ, ಅಹವಾಲು ಸ್ವೀಕರಿಸಲಿದ್ದಾರೆ.

<><><>

ಹೋಳಿ ಹಿನ್ನೆಲೆ, 12ನೇ ಹುಬ್ಬಳ್ಳಿ ಜಗ್ಗಲಗಿ ಹಬ್ಬ, ನಾಳೆ ಮಧ್ಯಾಹ್ನ 3 ಗಂಟೆಗೆ, ಹುಬ್ಬಳ್ಳಿಯ ಮೂರುಸಾವಿರ ಮಠದ ಮೈದಾನದಿಂದ, ಆರಂಭವಾಗಲಿದೆ. ನೂರಾರು ಜಾನಪದ ತಂಡಗಳ ಕಲಾವಿದರು ಭಾಗವಹಿಸಲಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆ, ಜೋಗ ಜಲಪಾತದ ಮುಖ್ಯ ದ್ವಾರದ ಕಾಮಗಾರಿ ಆರಂಭವಾಗಿದ್ದು, ಏಪ್ರಿಲ್ 30ರ ವರೆಗೆ, ಜೋಗ ಜಲಪಾತಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ.

<><><>

ಚಿಕ್ಕಮಗಳೂರು ಜಿಲ್ಲೆಯ, ಎಲ್ಲ ವಸತಿ ಗೃಹಗಳಲ್ಲಿ, ವಿದೇಶಿ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ಒದಗಿಸುವಂತೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಂ ಅಮಾಟೆ ಸೂಚಿಸಿದ್ದಾರೆ.

<><><>

## ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ, ಇಂದು ಬಣ್ಣದೋಕುಳಿ ಸಂಭ್ರಮ.
- ಬೆಂಗಳೂರಿನ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ, 40ನೇ ವಾರ್ಷಿಕೋತ್ಸವ ಇಂದು.
- 'ಚಿಟ್ಟೆಗಳ ಬಗ್ಗೆ ತಿಳಿಯಿರಿ' ವಿಶೇಷ ದಿನಾಚರಣೆ, ಅರ್ಥಪೂರ್ಣ ಸಂಪನ್ನ.
- ಇಂದು, ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ.
- ಸ್ವಾತಂತ್ರ್ಯ ಹೋರಾಟಗಾರ, ವಿದ್ಯಾವಾಚಸ್ಪತಿ ಪಂಚಾಕ್ಷರಿ ಹಿರೇಮಠ, ಧಾರವಾಡದಲ್ಲಿ ನಿಧನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>